ಇದೆ' ಎನ್ನುತ್ತಾರೆ ಸಿನಿಮಾ ವಿಶ್ಲೇಷಕ ಹರೀಶ್ ಮಲ್ಯ. ಕನ್ನಡ ಚಿತ್ರರಂಗವನ್ನು ಹತ್ತಿರದಿಂದ ನೋಡುತ್ತ ಬಂದಿರುವ ಅವರು, ಸ್ಟಾರ್ ನಟರೆಲ್ಲ ಸಿದ್ಧಸೂತ್ರಕ್ಕೆ ಕೊರಳು ಕೊಟ್ಟು ಸಿಕ್ಕಿಬಿದ್ದಿರುವುದನ್ನು ಗುರ್ತಿಸುತ್ತಾರೆ.

ಇಂದು ಇಂಥ ಸಿದ್ಧಸೂತ್ರಕ್ಕೆ ಶರಣುಹೋದವರು ಹಿಂದೊಮ್ಮೆ ಪ್ರಯೋಗದಲ್ಲಿ ಉತ್ಸುಕತೆ ಹೊಂದಿದ್ದರು ಎಂಬ ಸಂಗತಿಯನ್ನೂ ಅವರು ಉದಾಹರಣೆ ಸಮೇತ ಹೇಳುತ್ತಾರೆ.

'ಕೆಲವರು ಪ್ರಾಮಾಣಿಕವಾಗಿ ಸ್ಕ್ರಿಪ್ಟ್ ಮೇಲೆ ಕೆಲಸ ಮಾಡಿ ಸಿನಿಮಾ ಮಾಡುತ್ತಾರೆ. ಅಂಥ ಸಿನಿಮಾಕ್ಕೆ ಒಳ್ಳೆಯ ಸ್ಪಂದನವೂ ಸಿಗುತ್ತದೆ. ಆದರೆ ಅವರ ಮುಂದಿನ ಸಿನಿಮಾ ನೋಡಿದಾಗ ಅವರು ಗಾಂಧಿನಗರದ ಚರ್ವಿತ ಚರ್ವಣ ಸೂತ್ರಗಳಿಗೇ ಮರಳಿರುತ್ತಾರೆ. ಅದು ಯಾಕೆಂದು ಗೊತ್ತಿಲ್ಲ. ಜೆನ್ಯೂನ್‌ನೆಸ್ ಮತ್ತು ಕ್ವಾಲಿಟಿ ಇಟ್ಟುಕೊಂಡು ಹಲವರು ಸಿನಿಮಾರಂಗಕ್ಕೆ ಬರುತ್ತಾರೆ. ಆದರೆ ಅದನ್ನು ಮುಂದುವರಿಸುವುದಿಲ್ಲ' ಎಂಬ ಮಾತನ್ನು ಕೇಳಿಸಿಕೊಳ್ಳುವಾಗ, ಗಾಂಧಿನಗರ ತನ್ನೊಳಗೆ ಬರಗೊಳ್ಳುವ ಎಲ್ಲರನ್ನೂ ಒಂದೇ ಆಕಾರಕ್ಕೆ ತಂದು ಹರಾಜಿಗಿಡುವ ಫ್ಯಾಕ್ಟರಿಯಂತೆ ಭಾಸವಾಗುತ್ತದೆ.

ಹರೀಶ್ ತಮ್ಮ ಮಾತಿಗೆ ಉದಾಹರಣೆಯಾಗಿ ರಕ್ಷಿತ್ ಶೆಟ್ಟಿ ಅವರನ್ನೇ ನೀಡುತ್ತಾರೆ. 'ಉಳಿದವರು ಕಂಡಂತೆ' ನಂತರ 'ಕಿರಿಕ್ ಪಾರ್ಟಿ' ಮಾಡಲು ಕಾರಣ ಏನು ಎಂಬ ಪ್ರಶ್ನೆಗೆ ಅವರು ಉತ್ತರಿಸಿದ್ದು ಹೀಗಂತೆ: 'ನನ್ನ ಪ್ರಕಾರ ಕೆಲವು ಅಂಶಗಳು ಸಿನಿಮಾದಲ್ಲಿ ಇದ್ದರೆ ವರ್ಕ್ ಆಗತ್ತೆ ಎಂದು ಅಂದುಕೊಂಡಿದ್ದೆ. ಸ್ವಲ್ಪ ಕಾಮಿಡಿ, ಹಾಡು, ತಾಯಿ ಸೆಂಟಿಮೆಂಟ್ ಇರಬೇಕು. ಅವನ್ನೆಲ್ಲ ಇಟ್ಟುಕೊಂಡು ಪಾತ್ರ ಪೋಷಣೆಯಲ್ಲಿ ನನ್ನ ಶೈಲಿ ಅನುಸರಿಸಿದೆ. ಅದು ಜನರಿಗೆ ಇಷ್ಟವಾಗಲಿಲ್ಲ. ಈಗ ನಾನು ಸತ್ವಯುತ ಚಿತ್ರಕತೆ ಇರಲಿ, ಸತ್ವಯುತ ಪಾತ್ರಗಳನ್ನಾಗಲೀ ಬರೆಯಲಿಕ್ಕೆ ಹೋಗುವುದಿಲ್ಲ. ಯಾಕೆಂದರೆ ಜನರು ಅದನ್ನು ಇಷ್ಟಪಡುವುದಿಲ್ಲ. ನನ್ನ ಅಷ್ಟೂ ಶ್ರಮ ವ್ಯರ್ಥವಾಗುತ್ತದೆ. ಹಾಗಾಗಿ ಜನರಿಗೆ ಯಾವ ಟೋನ್‌ನಲ್ಲಿ ಬೇಕೋ ಆ ಟೋನ್‌ನಲ್ಲಿಯೇ ಸಿನಿಮಾ ಮಾಡ್ತೀನಿ. ನನ್ನ ಇಷ್ಟದ ಸಿನಿಮಾ ಮಾಡುವ ಆಸಕ್ತಿ ಹೊರಟು ಹೋಗಿದೆ'.

ಹೀಗೆ ಮಾತನಾಡುವವರು ರಕ್ಷಿತ್ ಒಬ್ಬರೇ ಅಲ್ಲ. ಇನ್ನು ಕೆಲವರು 'ಹಿಟ್ ಆಗುವಂಥ ಸಿನಿಮಾಗಳನ್ನು ಮಾಡಿ ಹಣ



ತಮಿಳಿನ 'ವಡಾ ಚೆನ್ನೈ' ಚಿತ್ರದಲ್ಲಿ ಧನುಷ್

